
ಮಾವನ ಮನೆಯವರು ಕೇಳಿದರೆ ಏನು ಹೇಳುವುದು ಎಂದು ತರಾವರಿಯಾಗಿ ಯೋಚಿಸುತ್ತಿರುವಾಗಲೆ, ಮಾವ ಹೋರಿ ಹನುಮಂತಪ್ಪನ ಫೋನ್ ಬಂದಿತು. ಭಯದಿಂದಲೇ ಫೋನ್ ಎತ್ತಿದ ಕೆಂಪನಿಗೆ ಮಾವ, 'ಅಳಿಯಂದ್ರೆ ಯಾಕೆ ಮಗ್ಳುನ್ನ ಒಬ್ಳುನ್ನೆ ಕಳ್ಸಿದಿರ, ನೀವು ಬರೋದಲ್ವ' ಅಂದನು. ಅದೇನೇನು ಉತ್ತರ ಕೊಟ್ಟನೊ ಅಂತೂ ಸಮಾಧಾನಗೊಂಡ.

ಅತ್ತ ಮರ್ನಾಲ್ಕು ದಿನಕ್ಕೆ ಮತ್ತೆ ಮಾವನ ಕರೆ ಬಂತು 'ಇನ್ನೇನು ಆಷಾಢ ಶುರುವಾಗುತ್ತೆ, ಮುಂದಿನ ತಿಂಗಳು ಕಳಿಸಿಕೊಡ್ತಿವಿ ತಗಳ್ರಿ' ಎಂದಿತು. 'ಹೂ ಮಾವ' ಅಂದು ಸುಮ್ಮನಾದ. ಆಷಾಢ ಕಳೆದು ಅತ್ತ ಎರಡು ತಿಂಗಳಾದ್ರೂ ಕೆಂಪನಿಗೆ ಹೆಂಡತಿಯ ಸುಳಿವಿಲ್ಲ. ಹೆಂಡತಿ ಮಾಲತಿಗಾದರೂ 'ನನ್ನ ಗಂಡನಿಗೆ ನನಗಿಂತ ಆ ಹಾಳಾದ್ ಉಜ್ಗಲ್ ಮೇಲೆನೆ ಪ್ರೀತಿ, ಅದುನ್ನೆ ಕಟ್ಕೆಂಡರ್ಲಿ ತಗ' ಎಂಬ ಧೋರಣೆ. ಈ ಮಧ್ಯೆ ಕೆಂಪನಿಗೆ ಸರೋಜಮ್ಮ ಮೆಸ್‌ನ ತಿಂಡಿ ಹಾಗು ಹೆಗಲು ಮೇಲೆ ಕೈಯಾಕಿರುವ ಹೆಂಡತಿಯ ಫೋಟೊ ನೋಡಿ ರಗ್ ಎಳೆದುಕೊಳ್ಳುವುದು ಖಾಯಂ ಆಗಿತ್ತು.

ಸತತ ಮೂರು ತಿಂಗಳು ಹೇಗೊ ನಿಭಾಯಿಸಿದ್ದ ಕೆಂಪನಿಗೆ ಮೊನ್ನೆ ರಾತ್ರಿ ಅವ್ವ ಫೋನ್ ಮಾಡಿ 'ಬರ ಮಂಗಳಾರ ಉಜ್ಗಲ್ಲಮ್ಮುನ ಬಾನ ಕಣಪ್ಪ, ಸೊಸೆನು ಕರ್ಕಂಡು ಬಾ' ಎಂದಿದ್ದಳು. ತುಂಬಾ ಯೋಚಿಸಿದ ಕೆಂಪ ಅಂತಿಮವಾಗಿ ಮನಸ್ಸ ತಿದ್ದುಪಡಿಗೊಳಿಸಿ ಮೂರು ದಿನಗಳ ರಜೆ ಮೇರೆಗೆ ಹೆಂಡತಿ ಊರಾದ ಮಲ್ಲಿಗೆರೆಗೆ ಹೊರಟು ಬಸ್ ಹತ್ತಿ ಕೂತಿದ್ದ. ಹಿಂದೆಲ್ಲ ಪ್ರಯಾಣಿಸುವಾಗ ಬಸ್‌ನಲ್ಲಿ ಸೀಟು ಸಿಕ್ಕರೆ ಸಾಕು ಕೂತ ಅರೆಗಳಿಗೆಯಲ್ಲೆ ನಿದ್ರೆಗೆ ಜಾರಿ ಬೆಲ್ಲ ತೂಗ ತೊಡಗುತ್ತಿದ್ದ. ಪಕ್ಕ ಕೂತಿದ್ದವರ ಮೇಲೆ ಬಾಗಶಃ ಬಾಗೆ ಇರುತ್ತಿದ್ದ ಕೆಂಪ ಕೆಲವೊಮ್ಮೆ ತೂಕಡಿಸಿ ಬಿದ್ದೇ ಬಿಡುತ್ತಿದ್ದ. ಆದರೆ, ಹೆಂಡತಿ ಊರಿಗೆ ಹೊರಟಿರುವ ಈಗಳಿಗೆಯಲ್ಲಿ ನಿದ್ರೆ ಸುಳಿಯಲೇ ಇಲ್ಲ. ಪಕ್ಕದಲ್ಲಿ ಕೂತಿದ್ದ ಒಂದಿಬ್ಬರು ಬದಲಾದ ನಂತರ ಕೆಂಪ ಇಳಿಯಬೇಕಾದ ಮಲ್ಲಿಗೆರೆ ಗೇಟ್ ಸಿಕ್ಕಿತು. ಗೇಟ್‌ನಿಂದ ಮಲ್ಲಿಗೆರೆಗೆ ಅರ್ಧ ಫರ್ಲಾಂಗು ದೂರ. ಹಿಂದೆಲ್ಲ ಅಳಿಮಯ್ಯ ಬರುವ ಸುದ್ದಿ ಮೊದಲೇ ತಿಳಿಯುತ್ತಿದ್ದುದರಿಂದ ಯಾರಾದರೂ ಒಬ್ಬರು ಗೇಟ್‌ಗೆ ಗಾಡಿ ತಗಂಡು ಬಂದಿರುತ್ತಿದ್ದರು. ಈಗ ಕೆಂಪ ತಾನು ಬರುವ ಸುದ್ದಿಯನ್ನು ಯಾರಿಗೂ ಕೊಡದಿದ್ದುದರಿಂದ ಮಲ್ಲಿಗೆರೆ ಗೇಟ್ ನಿರ್ಜನವಾಗಿ ಬಿಕೋ ಎನ್ನುತ್ತಿತ್ತು. ಸೂರ್ಯ ಮುಳುಗುವ ದಿಕ್ಕಿನಲ್ಲೇ ಇದ್ದರೂ ಕಳೆಗುಂದಿರಿಲಿಲ್ಲವಾದ್ದರಿಂದ, ಇನ್ನೂ ತಡಮಾಡಿಕೊಂಡು ಬಂದಿದ್ದರೂ ಆಗುತ್ತಿತ್ತು ಎಂದುಕೊಂಡ. ಮಲ್ಲಿಗೆರೆ ಕಡೆಯವರು ಯಾರಾದರೂ ಸಿಕ್ಕಿ 'ಏನ್ ಅಳಿಯಂದ್ರೆ ಅಪರೂಪವಾಗಿಬಿಟ್ರಿ' ಎಂದ್ರೆ,



ಕಲೆ: ವೆಂಕಟರಮಣ ಭಟ್